ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಭಟ್ಕಳ ಉತ್ತರ ಕನ್ನಡ ಜಿಲ್ಲೆ

## “ಮಾನವ ಕುಲ ತಾನೊಂದೇ ವಲಂ”

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ ಶಿರಾಲಿ



**ತಾ.ಭಟ್ಕಳ** **ಜಿ.ಉತ್ತರ ಕನ್ನಡ**

---

## ಪ್ರಥಮ ಭಾಷೆ ಕನ್ನಡ ಪಠ್ಯ ಪುಸ್ತಕ ಆಧಾರಿತ

# 9ನೇ ತರಗತಿ ವಾರ್ಷಿಕ ಪರೀಕ್ಷೆ 22-23

## ಪ್ರಶ್ನೆ ಪತ್ರಿಕೆ & ಮಾದರಿ ಉತ್ತರ ಸೂಚಿ





# 9ನೇ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ವಾರ್ಷಿಕ ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 12 |
| 2 | ಗ್ರಹಿಕೆ | 36 | 36 | 21 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 07 | 07 | 07 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 20 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 33 | 33 | 11 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 20 | 20 | 05 |
| 6 | ದೀರ್ಘ ಉತ್ತರ – 3 (ಊದು ಅಂಕಗಳ ಪ್ರಶ್ನೆಗಳು) | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 40 | 24 |
| 2 | ಸಾಧಾರಣ | 50 | 50 | 18 |
| 3 | ಕಠಿಣ | 20 | 10 | 03 |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ರಾಮರಾಜ್ಯ | 04 | 02 |
| 2 | ಬೆಡಗಿನ ತಾಣ ಜಯಪುರ | 04 | 02 |
| 3 | ನಾನು ಕಂಡಂತೆ | 03 | 02 |
| 4 | ಡಾ, ಸರ್ವೇಪಲ್ಲಿ ರಾಧಾಕೃಷ್ಣನ್ | 03 | 02 |
| 5 | ಪ್ರಜಾನಿಷ್ಠೆ | 04 | 01 |
| 6 | ಜನಪದ ಕಲೆಗಳ ವೈಭವ | 04 | 01 |
| 7 | ಚೆನ್ನಭೈರಾದೇವಿ | 03 | 03 |
| 8 | ಹರಲೀಲೆ | 03 | |
| | ಗದ್ಯ ಒಟ್ಟು | 28 | 13 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಹೊಸಹಾಡು | 04 | 01 |
| 2 | ಪಾರಿವಾಳ | 04 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | 04 | 02 |
| 4 | ಬಲಿಯನಿತ್ತೊಡೆ ಮುನಿವೆಂ | 05 | 02 |
| 5 | ಹೇಮಂತ | 04 | 02 |
| 6 | ತತ್ತ್ವಪದಗಳು | 05 | 02 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲುಹು | 04 | 01 |
| 8 | ಕನ್ನಡ ನಾಡು ನುಡಿ | | |
| | ಪದ್ಯ ಒಟ್ಟು | 30 | 11 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಗುಣಸಾಗರಿ ಪಂಡರಿ ಬಾಯಿ | 03 | 02 |
| 2 | ಹೊಳೆಬಾಗಿಲು | 02 | 01 |
| 3 | ನನ್ನಾಸೆ | 02 | 01 |
| 4 | ಉರಿದ ಬದುಕು | 02 | 01 |
| 5 | ಪುಟ್ಟಹಕ್ಕಿ | | |
| | ಪದ್ಯ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

## ಹಂತ : 5(ಎ) 9ನೆಯ ತರಗತಿ – ಪೂರ್ವ ಸಿದ್ಧತಾ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ರಾಮರಾಜ್ಯ | ** | 1(1) | ** | ** | ** | ** | ** | 1(3) | ** | ** | ** | ** | ** | ** | ** | 1(1) | ** | 1(3) | ** | ** | 04 | 02 |
| 2 | ಬೆಡಗಿನ ತಾಣ ಜಯಪುರ | ** | 1(1) | ** | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 3 | ನಾನು ಕಂಡಂತೆ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 4 | ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ | ** | ** | ** | ** | ** | 1(1) | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 5 | ಪ್ರಜಾನಿಷ್ಠೆ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 6 | ಜನಪದ ಕಲೆಗಳ ವೈಭವ | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 7 | ಚೆನ್ನಭೈರಾದೇವಿ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 03 | 01 |
| 8 | ಹರಲೀಲೆ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| | **ಗದ್ಯ ಒಟ್ಟು** | ** | 3(1) | ** | ** | ** | 1(1) | 4(2) | 1(3) | ** | ** | 3(3) | 1(4) | ** | ** | ** | 4(1) | 4(2) | 4(3) | 1(4) | ** | 28 | 13 |
| 1 | ಹೊಸಹಾಡು | ** | 1(1) | ** | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 2 | ಪಾರಿವಾಳ | ** | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | ** | 04 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 5 | ಹೇಮಂತ | ** | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | ** | 1(4) | ** | 04 | 01 |
| 6 | ತತ್ತ್ವಪದ | ** | 1(1) | ** | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | | ** | 04 | 02 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲುಹು | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 8 | ಕನ್ನಡ ನಾಡು ನುಡಿ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| | **ಪದ್ಯ ಒಟ್ಟು** | ** | 1(1) | | 1(4) | ** | 1(1) | 2(2) | 1(3) | ** | ** | 3(3) | 1(4) | ** | 1(4) | ** | 2(1) | 2(2) | 4(3) | 3(4) | ** | 30 | 11 |
| 1 | ಗುಣಸಾಗರಿ ಪಂಡರಿ ಬಾಯಿ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಹೊಳೆ ಬಾಗಿಲು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ನನ್ನಾಸೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ಉರಿದ ಬದುಕು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | ಪುಟ್ಟಹಕ್ಕಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | ** | ** |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | 1(1 | ** | ** | ** | ** | 4(2) | ** | ** | ** | ** | ** | ** | ** | ** | 1(1) | 4(2) | ** | ** | ** | 09 | 05 |

| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | 1(4) | ** | **04** | **01** |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| **ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ, ವಾಕ್ಯರಚನೆಗಳು.** | | | | | | | | | | | | | | | | | | | | | | | |
| ಕ್ರ ಸಂ. | ಪಾಠದ ಹೆಸರು | **ಜ್ಞಾನ / ಸ್ಮರಣೆ** | | | | **ಗ್ರಹಿಕೆ** | | | | | **ಅಭಿವ್ಯಕ್ತಿ** | | | | **ಪ್ರಶಂಸೆ** | **ಒಟ್ಟು** | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **10(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **10(1)** | ** | ** | ** | **4(1)** | ** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **10(1)** | **7(1)** | ** | **1(4)** | ** | ** | **10(2)** | **4(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **18 – 21** | | | | **15 – 36** | | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ**



# 9ನೇ ತರಗತಿ ವಾರ್ಷಿಕ ಪರೀಕ್ಷೆ ಮಾರ್ಚ್–2023

**ವಿಷಯ : ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**
**ಸಮಯ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

1. ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ಧಾಪುರಕ್ಕೆ ನಡೆದುಕೊಂಡು ಹೋದರು. – ಈ ವಾಕ್ಯದಲ್ಲಿರುವ ಅನ್ವರ್ಥನಾಮಪದ;
   ಎ) ವ್ಯಾಪಾರಿ ಬಿ) ಅನಂತಮೂರ್ತಿ ಸಿ) ತಮ್ಮ ಡಿ) ಸಿದ್ಧಾಪುರ
2. ಅವನು ನಾಳೆ ಹೋಗುತ್ತಾನೆ. – ಈ ವಾಕ್ಯವು ಕಾಲಪಲ್ಲಟವಾದಾಗ–
   ಎ) ಅವನು ನಾಳೆ ಹೋಗಬಹುದು ಬಿ) ಅವನು ನಾಳೆ ಹೋಗಿಯಾನು
   ಸಿ) ಅವನು ನಾಳೆ ಹೋಗುವವನು ಡಿ) ಅವನು ನಾಳೆ ಹೋಗನು
3. '<u>ಮರದಿಂದ</u> ಹಣ್ಣು ಕೆಳಗೆ ಬಿತ್ತು'. – ಇದರಲ್ಲಿ ಗೆರೆ ಎಳೆದ ಪದದ ಕಾರಕಾರ್ಥ;
   ಎ) ಕರ್ತ್ರರ್ಥ ಬಿ) ಕರ್ಮಾರ್ಥ ಸಿ) ಕರಣಾರ್ಥ ಡಿ) ಸಂಪ್ರದಾನ
4. ತೆಂಗಿನ ಕಾಯಿಯು ಶಿವನಂತೆ ಮುಕ್ಕಣ್ಣುಗಳನ್ನು ಹೊಂದಿದೆ.–ಇದರಲ್ಲಿ 'ಮುಕ್ಕಣ್ಣು' ಪದವು ಈ ಸಮಾಸವಾಗಿದೆ.
   ಎ) ಅಂಶಿಸಮಾಸ ಬಿ) ದ್ವಂದ್ವಸಮಾಸ ಸಿ) ದ್ವಿಗುಸಮಾಸ ಡಿ) ಬಹುವ್ರೀಹಿ ಸಮಾಸ
5. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು. – ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ
   (ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
6. ಚೆಂಡು ಮೇಲಕ್ಕೆ ಹೋದೀತು.– ಈ ವಾಕ್ಯದಲ್ಲಿ 'ಹೋದೀತು' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ.
   ಎ) ನಿಷೇಧಾರ್ಥಕ ಬಿ) ಸಂಭಾವನಾರ್ಥಕ ಸಿ) ವಿಧ್ಯರ್ಥಕ ಡಿ) ಅಕರ್ಮಕ ಕ್ರಿಯಾಪದ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. . 4*1=4**

7. ಮಳೆಗಾಲ : ಆದೇಶ ಸಂಧಿ : : ವಧೂಪೇತ : ....................
8. ನೆಗಪಿ : ಎತ್ತಿ : : ನೆರಪಿ : ................
9. ಹಾಡುತ್ತೇನೆ : ಉತ್ತಮ ಪುರುಷ ಏಕವಚನ : : ಆಡಿದನು : ....................
10. ಬರ್ತಾರೆ : ಬರುತ್ತಾರೆ : : ತಕ್ಕಳಪ್ಪ : ....................

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . 7*1=7**

11. ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನು ಯಾರು?
12. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ ?
13. ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?
14. ರಾಷ್ಟ್ರಪತಿಗಳಾಗಿ ರಾಧಾಕೃಷ್ಣನ್ ಅವರು ವೇತನವನ್ನು ಹೇಗೆ ಸದುಪಯೋಗಪಡಿಸಿಕೊಂಡರು?
15. ಕಡಿದೊಗೆಯಬೇಕಾದ ಪಾಶಗಳು ಯಾವುವು?
16. ಯಾರ ಸ್ನೇಹವನ್ನು ಮಾಡಿ ಕೆಡಬಾರದು?

17. ಮುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಯಾರನ್ನು ಸ್ವಾಗತಿಸುತ್ತದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . 10*2=20**

18. ಸ್ವಾಮಿಯವರ ಸಾವು ಲೇಖಕರನ್ನು ಯಾಕೆ ಕಾಡಿತು?
19. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?
20. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ? ವಿವರಿಸಿ.
21. ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು?
22. ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರ ರೂಪಲಾವಣ್ಯ ಹೇಗಿತ್ತು? ವಿವರಿಸಿ.
23. ಮುತ್ತಿನ ಸತ್ತಿಗೆಯ ವಿಶೇಷತೆ ಕುರಿತು ಹರಿಶ್ಚಂದ್ರನು ಏನು ಹೇಳುತ್ತಾನೆ?
24. ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?
25. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?
26. ಲಾಂಚು ಬರುವವರೆಗೆ ಹೊತ್ತುಕಳೆಯಲು ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು?
27. ಅಳುವ ಕಂದನ ನಗಿಸಲು ಮತ್ತು ಮಾನವನ ಅಜ್ಞಾನತೆ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

28. ಡಾ. ಎನ್. ರಂಗನಾಥ ಶರ್ಮಾ

29. ಜನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. . 1*3=3**

30. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. . 1*3=3**

31. ಶಾನುಭೋಗರು ಕುಲಾಲ ಚಕ್ರದಂತೆ ತಿರುಗುತ್ತಿದ್ದರು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

32. ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ

**ಅಥವಾ**

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 6*3=18**

33. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"
34. "ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು"
35. " ನೀನತ್ಯಂತ ಕರುಣಿ"
36. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"
37. "ಚಂದಿರನೋ ಭಾಸ್ಕರನೋಯೆಂಬಂತೆ"
38. "ಮಹಾತ್ಮರ ಕೈಗೆ ಬೆತ್ತ ನಾನಾದೆ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . 1*4=4**

39. ಹೇಮಂತ ಋತುರಾಜ________________

______________________

______________________

______________________ ಮರುತನಿಲ್ಲ

**ಅಥವಾ**

ಹೇಮಂತನಾಳಿಕೆಯ ______________

______________________

______________________

______________________ಜೀವಗಳ ಧರ್ಮ

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ.** **1*4=4**

40. ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರು ಕೂಡ ತಾಳಬೇಕು ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.

ಅಥವಾ

ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

42. ಕನ್ನಡ ನಾಡಿನ ವಿಸ್ತಾರ, ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ?

ಅಥವಾ

ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತ ವಾಗಿದೆ.?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4 (2+2)**

43. ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ್ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ : ಕನ್ನಡ, ತುಳು, ಕೊಂಕಣಿ, ಮರಾಠಿ ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ : ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯವಹಾರಿಕವಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕೆಂಬ ನಿಯಮವಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ದೇವಭಾಷೆ ಎನಿಸಿರುವ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೇ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ, ಸಂಬಳ ಪಡೆಯುತ್ತಿದ್ದನು. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

**ಪ್ರಶ್ನೆಗಳು :**

ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯತ್ಯಾಸಗಳೇನು ?

ಆ) ಲಿಪಿಯ ಉಗಮ ಹೇಗಾಯಿತು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ರಾಯಚೂರಿನ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಚೈತ್ರಾಲಿ' ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಅನುಭವವನ್ನು ಕುರಿತು ಧಾರವಾಡದಲ್ಲಿರುವ ನಿಮ್ಮ ಅಕ್ಕನಿಗೊಂದು ಪತ್ರಬರೆಯಿರಿ.

**ಅಥವಾ**

ನಿಮ್ಮನ್ನು ನಿಮ್ಮನ್ನು ಹಾವೇರಿಯ ವಿದ್ಯಾನಗರ ಬಡಾವಣೆಯ 'ಸಂಜೀವ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಚರಂಡಿಗಳನ್ನು ದುರಸ್ತಿಪಡಿಸುವಂತೆ ಕೋರಿ, ನಗರಸಭೆಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

45. ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

**ಅಥವಾ**

ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ, ಭಟ್ಕಳ

## 9ನೇ ತರಗತಿ ವಾರ್ಷಿಕ ಪರೀಕ್ಷೆ ಮಾರ್ಚ್-2023

ವಿಷಯ : ಪ್ರಥಮ ಭಾಷೆ ಕನ್ನಡ
ಸಮಯ : 3 ಗಂಟೆ 15 ನಿಮಿಷ

## ಮಾದರಿ ಉತ್ತರ ಸೂಚಿ

ವಿಷಯ ಸಂಕೇತ : 01K
ಗರಿಷ್ಠ ಅಂಕಗಳು : 100

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

1. ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ಧಾಪುರಕ್ಕೆ ನಡೆದುಕೊಂಡು ಹೋದರು. – ಈ ವಾಕ್ಯದಲ್ಲಿರುವ ಅನ್ವರ್ಥನಾಮಪದ;
ಎ) ವ್ಯಾಪಾರಿ ಬಿ) ಅನಂತಮೂರ್ತಿ ಸಿ) ತಮ್ಮ ಡಿ) ಸಿದ್ಧಾಪುರ

**ಉತ್ತರ : ಎ) ವ್ಯಾಪಾರಿ**

2. ಅವನು ನಾಳೆ ಹೋಗುತ್ತಾನೆ. – ಈ ವಾಕ್ಯವು ಕಾಲಪಲ್ಲಟವಾದಾಗ–
ಎ) ಅವನು ನಾಳೆ ಹೋಗಬಹುದು ಬಿ) ಅವನು ನಾಳೆ ಹೋಗಿಯಾನು
ಸಿ) ಅವನು ನಾಳೆ ಹೋಗುವವನು ಡಿ) ಅವನು ನಾಳೆ ಹೋಗನು

**ಉತ್ತರ : ಸಿ) ಅವನು ನಾಳೆ ಹೋಗುವವನು**

3. '<u>ಮರದಿಂದ</u> ಹಣ್ಣು ಕೆಳಗೆ ಬಿತ್ತು'. – ಇದರಲ್ಲಿ ಗೆರೆ ಎಳೆದ ಪದದ ಕಾರಕಾರ್ಥ;
ಎ) ಕರ್ತ್ರರ್ಥ ಬಿ) ಕರ್ಮಾರ್ಥ ಸಿ) ಕರಣಾರ್ಥ ಡಿ) ಸಂಪ್ರದಾನ

**ಉತ್ತರ : ಸಿ) ಕರಣಾರ್ಥ**

4. ತೆಂಗಿನ ಕಾಯಿಯು ಶಿವನಂತೆ ಮುಕ್ಕಣ್ಣುಗಳನ್ನು ಹೊಂದಿದೆ.–ಇದರಲ್ಲಿ 'ಮುಕ್ಕಣ್ಣು' ಪದವು ಈ ಸಮಾಸವಾಗಿದೆ.
ಎ) ಅಂಶಿಸಮಾಸ ಬಿ) ದ್ವಂದ್ವಸಮಾಸ ಸಿ) ದ್ವಿಗುಸಮಾಸ ಡಿ) ಬಹುವ್ರೀಹಿ ಸಮಾಸ

**ಉತ್ತರ : ಸಿ) ದ್ವಿಗು ಸಮಾಸ**

5. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.. – ಈ ವಾಕ್ಯವು
(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

**ಉತ್ತರ : ಸಿ) ಸಂಯೋಜಿತ ವಾಕ್ಯ**

6. ಚೆಂಡು ಮೇಲಕ್ಕೆ ಹೋದೀತು.– ಈ ವಾಕ್ಯದಲ್ಲಿ 'ಹೋದೀತು' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ.
ಎ) ನಿಷೇಧಾರ್ಥಕ ಬಿ) ಸಂಭಾವನಾರ್ಥಕ ಸಿ) ವಿದ್ಯರ್ಥಕ ಡಿ) ಅಕರ್ಮಕ ಕ್ರಿಯಾಪದ

**ಉತ್ತರ : ಬಿ) ಸಂಭಾವನಾರ್ಥಕ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. . 4*1=4**

7. ಮಳೆಗಾಲ : ಆದೇಶ ಸಂಧಿ : : ವಧೂಪೇತ : <u>ಸವರ್ಣದೀರ್ಘ ಸಂಧಿ</u>
8. ನೆಗಪಿ : ಎತ್ತಿ : : ನೆರವಿ : <u>ಸೇರಿದ ಜನ</u>
9. ಹಾಡುತ್ತೇನೆ : ಉತ್ತಮ ಪುರುಷ ಏಕವಚನ : : ಆಡಿದನು : <u>ಅನ್ಯಪುರುಷ ಏಕವಚನ</u>
10. ಬರ್ತಾರೆ : ಬರುತ್ತಾರೆ : : ತಕ್ಕಳಪ್ಪ : <u>ತೆಗೆದುಕೊಳ್ಳಪ್ಪ</u>

---

## III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . 7*1=7

**11. ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನು ಯಾರು?**

❖ ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನುಉದಾತ್ತ ತತ್ತ್ವ–ಪಂಡಿತ.

**12. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?**

❖ ಜಯಪುರದ ಜನರಿಗೆ ಕೆಂಪು, ಕಿತ್ತಳೆ, ಹಳದಿ ಎಂದರೆ ಇಷ್ಟ.

**13. ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?**

❖ ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಪಿಟೀಲು.

**14. ರಾಷ್ಟ್ರಪತಿಗಳಾಗಿ ರಾಧಾಕೃಷ್ಣನ್ ಅವರು ವೇತನವನ್ನು ಹೇಗೆ ಸದುಪಯೋಗಪಡಿಸಿಕೊಂಡರು?**

❖ ಹತ್ತು ಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರುಪಾಯಿಗಳನ್ನು ಮಾತ್ರ ಪಡೆದು, ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.

**15. ಕಡಿದೊಗೆಯಬೇಕಾದ ಪಾಶಗಳು ಯಾವುವು?**

❖ ಜಾತಿ, ಕುಲ, ಮತ, ಧರ್ಮ –ಈ ಪಾಶಗಳನ್ನು ಕಡಿದೊಗೆಯಬೇಕು.

**16. ಯಾರ ಸ್ನೇಹವನ್ನು ಮಾಡಿ ಕೆಡಬಾರದು?**

❖ ಹೀನ ಮನುಷ್ಯನ ಸ್ನೇಹ ಮಾಡಿ ಕೆಡಬಾರದು.

**17. ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಯಾರನ್ನು ಸ್ವಾಗತಿಸುತ್ತದೆ?**

❖ ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಸೂರ್ಯನನ್ನು ಸ್ವಾಗತಿಸುತ್ತದೆ.

---

## IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20

**18. ಸ್ವಾಮಿಯವರ ಸಾವು ಲೇಖಕರನ್ನು ಯಾಕೆ ಕಾಡಿತು?**

❖ "ಸ್ವಾಮಿ ಆಹಾರದಲ್ಲಿ ಕ್ಲುಪ್ತವಾಗಿದ್ದವರು. ಸಿಗರೇಟು ಸೇದುತ್ತಿದ್ದರೂ ಅತಿ ಎನ್ನುವಷ್ಟು ಸೇದುತ್ತಿರಲಿಲ್ಲ. ಓದು ಬರಹ ಸಂಶೋಧನೆಗಳಲ್ಲಿ ತಮ್ಮನ್ನು ತಾವು ವಿಪರೀತ ಸವೆಸಿಕೊಂಡುಮಾಡಿದರೂ ಅದರಲ್ಲಿ ಮಗ್ನರಾಗುತ್ತಿದ್ದರು, ಸಂತೋಷ ಪಡುತ್ತಿದ್ದರು. ಸಂತೋಷವಿದ್ದಲ್ಲಿ ಯಾರೂ ಸವೆಯುವುದಿಲ್ಲ". ಹೀಗಿದ್ದರೂ ಅವರು ಸತ್ತದ್ದು ಲೇಖಕರಿಗೆ ಬೇಸರವುಂಟುಮಾಡಿತ್ತು. ಈ ರೀತಿಯಾಗಿ ಸ್ವಾಮಿಯವರ ಸಾವು ಲೇಖಕರಿಗೆ ಕಾಡಿತ್ತು.

---

**19. 'ಶಿಕ್ಷಣದ ಮಹತ್ತ್ವ'ವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?**

❖ ಶಿಕ್ಷಣದ ಮಹತ್ವವನ್ನು ಮನಗಂಡ ರಾಧಾಕೃಷ್ಣನ್ ಅವರು "ಶಿಕ್ಷಣವು ಜೀವನದ ಅವಿಭಾಜ್ಯ ಅಂಗ. ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" ಎಂದಿದ್ದಾರೆ. ಮನುಷ್ಯನಿಗೆ ಕಣ್ಣು, ಕಿವಿ, ಬಾಯಿ, ಮುಂತಾದ ಅಂಗಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಶಿಕ್ಷಣ ಎಂದಿದ್ದಾರೆ.

---

**20. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ? ವಿವರಿಸಿ.**

❖ ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆ ಧರಿಸುತ್ತಾರೆ.

---

**21. ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು?**

❖ ಯಕ್ಷಗಾನದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು. ತೆಂಕಿನಲ್ಲಿ ಅರ್ಥಗಾರಿಕೆಗೆ ಪ್ರಾಧಾನ್ಯ ಇದ್ದು, ದೊಡ್ಡ ದೊಡ್ಡ ಹೆಜ್ಜೆ ಹಾಕಿ ಗಿರಕಿ ಹೊಡೆಯುವುದು ಇದರ ವೈಶಿಷ್ಟ್ಯ. ತೆಂಕುತಿಟ್ಟಿನ ಚಂಡೆ ವಾದಕನಿಗೆ ಆಸನ ವ್ಯವಸ್ಥೆಯಿರುವುದಿಲ್ಲ. ಪಾತ್ರಧಾರಿಗಳಿಗೆ ಒಂದು ಸಿಂಹಾಸನವಿರುತ್ತದೆ.

ಬಡಗುತಿಟ್ಟಿನಲ್ಲಿ ಇದರ ಬದಲಿಗೆ ರಥದ ಆಕೃತಿಯ ಆಸನವನ್ನು ಸಾಂಪ್ರದಾಯಿಕವಾಗಿ ಬಳಸುತ್ತಿದ್ದರು. ಬಡಗಿನಲ್ಲಿ ಕುಣಿತ ಹಾಗೂ ಅಭಿನಯಕ್ಕೆ ಪ್ರಾಧಾನ್ಯತೆ ಇರುತ್ತದೆ. ಹಿಮ್ಮೇಳದ ಪ್ರಮುಖ ವಾದ್ಯ ಪರಿಕರಗಳೆಂದರೆ, ಚಂಡೆ, ಮದ್ದಳೆ, ಶ್ರುತಿ, ತಾಳ ಅಥವಾ ಜಾಗಟೆ.

---

**22. ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರ ರೂಪಲಾವಣ್ಯ ಹೇಗಿತ್ತು? ವಿವರಿಸಿ.**

❖ ಕಾಳರಾತ್ರಿಯ ಕನ್ಯೆಯರು ಹಗಲನ್ನು ನೋಡುವುದಕ್ಕೆಂದು ಬಂದರೋ ಸುರಾಸುರರು ಸಮುದ್ರ ಮಥಿಸುವಾಗ ಹೊರಹೊಮ್ಮಿದ ಹೊಸ ವಿಷದ ಹೊಗೆ ಆವರಿಸಿ ಜಲದೇವಿಯರೆಲ್ಲ ಕಂದು ಬಣ್ಣಕ್ಕೆ ತಿರುಗಿ ಮನನೊಂದು ಮಾಣಿಸರ್ ಆದಂತೆ, ಕಮಲಜ ನೀಲವರ್ಣಕ್ಕೆ ತಿರುಗಿ ಪುತ್ಥಳಿಯಾದನೋ ಎಂಬಂತೆ ಜೀವಂತ ಪುತ್ಥಳೀಯರಂತೆ ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರು ಇದ್ದರು ಎಂದು ಅವರ ರೂಪಲಾವಣ್ಯ ಕುರಿತು ವರ್ಣಿಸಿದ್ದಾರೆ.

---

**23. ಮುತ್ತಿನ ಸತ್ತಿಗೆಯ ವಿಶೇಷತೆ ಕುರಿತು ಹರಿಶ್ಚಂದ್ರನು ಏನು ಹೇಳುತ್ತಾನೆ?**

❖ ಗಾನರಾಣಿಯರು ಸುಡುವ ಬಿಸಿಲನ್ನು ಸಹಿಸಲು ಸಾಧ್ಯವಿಲ್ಲ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಡು ಎಂದು ಹರಿಶ್ಚಂದ್ರ ರಾಜನನ್ನು ಕೇಳುತ್ತಾರೆ. ಆಗ ಹರಿಶ್ಚಂದ್ರನು ಗಾನರಾಣಿಯರಿಗೆ "ಈ ಸತ್ತಿಗೆಯನ್ನು ಸಾಮಾನ್ಯ ಜನರಿಗೆ ಕೊಡಬಾರದು. ವಂಶಪರಂಪರೆಯಿಂದ ಬಂದಿದ್ದರಿಂದ ತಂದೆಯು, ಪಟ್ಟವನ್ನು ಕಟ್ಟುವ ಸಮಯದಲ್ಲಿ ಇದನ್ನು ಪೂಜಿಸಿಕೊಳ್ಳು ವುದರಿಂದ ಇದು ದೇವರು. ಎಲ್ಲರಿಗೂ ನೆರಳನ್ನು ನೀಡುವ ತಾಯಿ. ಯುದ್ಧದಲ್ಲಿ ಶತ್ರುಗಳನ್ನು ನಡುಗಿಸುವ ಇದು ಚದುರಂಗಬಲಕ್ಕೆ ಸಮಾನ" ಎಂದು ಹರಿಶ್ಚಂದ್ರನು ಮುತ್ತಿನ ಸತ್ತಿಗೆಯ ವಿಶೇಷತೆಯನ್ನು ಕುರಿತು ಹೇಳಿದನು.

---

**24. ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?**

❖ ಚಿಕ್ಕಂದಿನಿಂದಲೇ ಪಂಢರಿಬಾಯಿ ಅವರಿಗೆ ಸಂಗೀತದ ಅಭ್ಯಾಸವಾಗಿತ್ತು. ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಮನೆಯಲ್ಲಿ ಇದ್ದ ಸೃಜನಶೀಲ ವಾತಾವರಣ ಪಂಢರಿಬಾಯಿಯವರ 'ಕಲಾವಿದೆ' ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

---

**25. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?**

❖ ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ "ಕುಡಿ ತಮ್ಮ ಮೊದಲು ಜೀವ ಬದುಕಲಿ. ಜೀವಕ್ಕೆ ಯಾವ ಕುಲನೂ ಇಲ್ಲ. ಗಾಳಿಗೆ ಕುಲ ಇದೀಯಾ ತಮ್ಮ? ನೀರಿಗೆ ಕುಲ ಇದೀಯಾ? ನೆಲಕ್ಕೆ ಕುಲ ಇದೀಯಾ? ಇದೆಲ್ಲ ನಾವು ಮಾಡಿಕೊಂಡಿದ್ದು" ಎಂಬ ನೀತಿಯ ಮಾತುಗಳಾಡಿದರು.

---

**26. ಲಾಂಚು ಬರುವವರೆಗೆ ಹೊತ್ತುಕಳೆಯಲು ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು?**

❖ "ಬೇಕಿದ್ದರೆ ಈ ದಂಡೆಗುಂಟ ಅಡ್ಡಾಡುತ್ತಾ ಕಪ್ಪೆ ಚಿಪ್ಪು, ನುಣ್ಣನೆ ಉರುಟು ಕಲ್ಲುಗಳನ್ನು ಹೆಕ್ಕಬಹುದು. ಹೆಕ್ಕಿದ ಕಲ್ಲನ್ನು ಹೊಳೆಗೆ ಎಸೆಯಬಹುದು. ಕಲ್ಲು ಬಿದ್ದ ಜಾಗದಲ್ಲಿ ಎದ್ದ ಅಲೆ, ಅಲೆ ಅಲೆಯಾಗಿ ನಿಮ್ಮತ್ತಲೇ ತೇಲಿ ಬರುವುದನ್ನು ನೋಡುತ್ತಾ ಮೈಮರೆಯಬಹುದು". ಹೀಗೆ ಲಾಂಚು ಬರುವವರೆಗೆ ಹೊತ್ತುಕಳೆಯಲು ಹಲವು ಚಟುವಟಿಕೆಗಳನ್ನು ಮಾಡಬಹುದು.

---

**27. ಅಳುವ ಕಂದನ ನಗಿಸಲು ಮತ್ತು ಮಾನವನ ಅಜ್ಞಾನತೆ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?**

❖ ಕವಯಿತ್ರಿ ಇಂದುಮತಿ ಲಮಾಣಿಯವರು ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳ ನಾನಾಗಬೇಕು. ಹಾಗೂ ಮಾನವನ ಅಜ್ಞಾನತೆ ತೊಲಗಿಸಲು – ವಾಗ್ದೇವಿಯ ಕೈಯಲ್ಲಿಯ ಗ್ರಂಥ ನಾನಾಗಿ ಧನ್ಯಳಾಗಬೇಕು ಎಂದು ಬಯಸಿದ್ದಾರೆ.

---

## V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

**28. ಗೊರೂರು ರಾಮಸ್ವಾಮಿ ಅಯ್ಯಂಗಾರ**

❖ **ಡಾ. ಎನ್. ರಂಗನಾಥ ಶರ್ಮಾ** ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಾಂಡ ವಿದ್ವತ್ತೆ ಇದ್ದ ಓರ್ವ ಹಿರಿಯ ಸಾಹಿತಿ. ಇವರು **ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನಡಹಳ್ಳಿ ಗ್ರಾಮದಲ್ಲಿ 1916ರ ಜನವರಿ 7ರಂದು** ಜನಿಸಿದರು. ರಂಗನಾಥ ಶರ್ಮಾರದು ಅಪರೂಪದ ಭಾಷಾಪಾಂಡಿತ್ಯ. ಕನ್ನಡ-ಸಂಸ್ಕೃತಗಳೆರಡರಲ್ಲೂ ಸರಿಸಮವೆನಿಸುವಂಥ ವಿದ್ವತ್ತು. **ಏಕಚಕ್ರಂ, ಬಾಹುಬಲಿ ವಿಜಯಂ, ಗುರುಪಾರಮಿತ್ರಚರಿತಂ, ಗೊಮ್ಮಟೇಶ ಪಂಚಕಂ** ಮೊದಲಾದ ಕೃತಿಗಳನ್ನು ಅವರು ಸಂಸ್ಕೃತದಲ್ಲಿ ಬರೆದು ಪ್ರಕಟಿಸಿದ್ದಾರೆ. **ಭಾಷಾಂತರ ಪಥ, ಲೌಕಿಕ ನ್ಯಾಯಗಳು, ಸೂಕ್ತಿವ್ಯಾಪ್ತಿ, ಉಪನಿಷತ್ತಿನ ಕಥೆಗಳು, ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ ಮೊದಲಾದ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ.**

ಇವರಿಗೆ ಸಂಸ್ಕೃತ ಅಧ್ಯಾಪನಕ್ಕಾಗಿ **ರಾಷ್ಟ್ರಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ತಿರುಪತಿಯ ಸಂಸ್ಕೃತ ವಿಶ್ವವಿದ್ಯಾಲಯದ "ಮಹಾಮಹೋಪಾಧ್ಯಾಯ"** ಎಂಬ ಗೌರವ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಗೌರವ ಡಾಕ್ಟರೇಟ್,** ಆದಿಚುಂಚನಗಿರಿ ಮಹಾಸಂಸ್ಥಾನವು ಕೊಡಮಾಡುವ ಚುಂಚಶ್ರೀ ಪ್ರಶಸ್ತಿ, ರಾಷ್ಟ್ರಪತಿಗಳ ಗೌರವಪ್ರಶಸ್ತಿಪತ್ರ ಮುಂತಾದ ಹಲವು ಪ್ರಶಸ್ತಿ-ಪುರಸ್ಕಾರಗಳು ಸಂದಿವೆ. ಕೃತಿಗಳು.

---

**29. ಜನ್ನ**

❖ ಜನ್ನ ಹಾಸನ ಜಿಲ್ಲೆಯ **ಹಳೇಬೀಡು** ಪ್ರಾಂತದಲ್ಲಿ **ಕ್ರಿ.ಶ.1225ರಲ್ಲಿ** ಜನಿಸಿದರು. ಹೊಯ್ಸಳರ ಬಲ್ಲಾಳನಿಂದ **ಕವಿಚಕ್ರವರ್ತಿ ಅಭಿಧಾನ**ವನ್ನು ಪಡೆದ ಈತ **ಯಶೋಧರ ಚರಿತೆ, ಅನಂತನಾಥಪುರಾಣ** ಮತ್ತು **ಅನುಭವ ಮುಕುರ** ಕಾವ್ಯಗಳ ಕರ್ತೃ. **ನರಸಿಂಹಬಲ್ಲಾಳನ ಆಸ್ಥಾನದಲ್ಲಿ ದಂಡಾಧಿಪತಿಯೂ ಮಂತ್ರಿಯೂ ಆಗಿದ್ದನು.** ಜೈನ ಧಾರ್ಮಿಕ ಕಾವ್ಯಗಳನ್ನು ರಚಿಸಿದ ಜನ್ನ ಅಹಿಂಸಾ ತತ್ವವನ್ನು ಕಾವ್ಯಗಳಲ್ಲಿ ಸಂದೇಶ ರೂಪದಲ್ಲಿ ನೀಡಿದ ಕವಿ

---

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. . 1*3=3

```
       3      4       3     4
     U U U | – U U | – U | –  UU |
30. ಸುಳಿದ | ಬಾಳೆಯ | ಹಣ್ಣಿ | ನಂದದಿ |

       3      4      3     4
     UUU | – U U | –U | – UU |
     ಕಳಿದ | ಸಿಗುರಿನ | ಕಬ್ಬಿ | ನಂದದಿ |

       3     4      3     4      3     4    ಗು
     UUU | – U U | – U | –  UU | U UU | – – | – |
     ಅಳಿದ | ಉಷ್ಣದ | ಹಾಲಿ | ನಂದದಿ | ಸುಲಭ | ವಾಗಿ | ರ್ಪ |
```

**ಛಂದಸ್ಸು : ಮಾತ್ರಾಗಣದ 'ಭಾಮಿನಿ ಷಟ್ಪದಿ' ಛಂದಸ್ಸಿನಲ್ಲಿದೆ.**

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. . 1*3=3

**31. ಶಾನುಭೋಗರು ಕುಲಾಲ ಚಕ್ರದಂತೆ ತಿರುಗುತ್ತಿದ್ದರು.**

❖ **ಅಲಂಕಾರ : ಉಪಮಾಲಂಕಾರ**

ಲಕ್ಷಣ : ಎರಡು ವಸ್ತುಗಳ ಪರಸ್ಪರ ಹೋಲಿಕೆ.

ಉಪಮೇಯ : **ಶಾನುಭೋಗರು**

ಉಪಮಾನ : **ಕುಲಾಲ ಚಕ್ರ**

ಉಪಮವಾಚಕ : **ಅಂತೆ**

ಸಮಾನಧರ್ಮ : **ತಿರುಗುವುದು**

**ಸಮನ್ವಯ :** ಇಲ್ಲಿ ಉಪಮೇಯವಾದ ಶಾನುಭೋಗರು ತಿರುಗುವುದನ್ನು, ಉಪಮಾನವಾದ ಕುಲಾಲ ಚಕ್ರ ತಿರುಗುವುದಕ್ಕೆ ಹೋಲಿಸಲಾಗಿದೆ.

---

## VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3

**32. ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ**

**ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು** ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ***'ಗಾದೆಗಳನ್ನು ವೇದಗಳಿಗೆ ಸಮಾನ'*** ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ** ಒಂದಾಗಿದೆ.

ನಮಗೆ ಅನೇಕ ಬಂಧುಗಳಿರಬಹುದು. ಅವರಾರೂ ತಾಯಿಯಂತೆ ನಮಗೆ ಅತ್ಯಂತ ಅತ್ಮೀಯರಾಗುವುದಿಲ್ಲ. ತಾಯಿ ನಿಜಕ್ಕೂ ಬಂಧುಗಳಿಗೆ ಮೀರಿದವಳು. ಅವಳು ದೇವರಿಗೆ ಸಮಾನಳಾದವಳು. ಹೀಗಾಗಿ ತಾಯಿಯನ್ನು ಬಿಟ್ಟರೆ ಮಕ್ಕಳಿಗೆ ಬೇರೆ ಬಂಧು ಬಳಗ ಇಲ್ಲವೆಂದು ಹೇಳಬಹುದು. ನಮ್ಮ ಬಾಲ್ಯದಿಂದ ನಮಗೆ ಹತ್ತಿರವಾಗಿ ನಮ್ಮ ನೋವು ನಲಿವುಗಳಿಗೆ ಸ್ಪಂದಿಸುತ್ತ ನಮಗಾಗಿ ತನ್ನ ಜೀವನದಲ್ಲಿ ಅನೇಕ ತ್ಯಾಗಗಳನ್ನು ಮಾಡುವ ತಾಯಿಯಂತ ಬಂಧು ಬೇರೊಬ್ಬರಿಲ್ಲ.

ಅದೇರೀತಿ ಎಲ್ಲಾ ರುಚಿಗಳಲ್ಲಿ ಉಪ್ಪಿನ ರುಚಿ ಶ್ರೇಷ್ಠವಾದುದು. ಷಡ್ರಸಗಳಲ್ಲಿ ಉಪ್ಪಿನ ಸ್ಥಾನ ಮೊದಲಿನದು. ಉಳಿದ ರುಚಿಗಳು ಬೇರೆಬೇರೆ ಸಂದರ್ಭದಲ್ಲಿ ರುಚಿಕರವೆನಿದರು ಕೊನೆಗೆ ಉಪ್ಪಿನ ಸಹಯೋಗವಿಲ್ಲದೆ ಊಟ ಸಪ್ಪೆ ಎನಿಸುತ್ತದೆ.ಆದ್ದರಿಂದ ಉಪ್ಪು ರುಚಿಗಳಲ್ಲೇ ಉತ್ತಮವಾದುದ ಎಂದು ಈ ಗಾದೆ ಮಾತು ಸೂಚಿಸುತ್ತದೆ.

**ಅಥವಾ**

❖ **'ಇರುಳು ಕಂಡ ಬಾವಿಗೆ ಹಗಲುಬೀಳಬಾರದು'**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ***'ಗಾದೆಗಳನ್ನು ವೇದಗಳಿಗೆ ಸಮಾನ'*** ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ಇರುಳು ಕಂಡ ಬಾವಿಗೆ ಹಗಲುಬೀಳಬಾರದು'** ಎಂಬ ಗಾದೆಯೂ ಒಂದಾಗಿದೆ.

ಕಗ್ಗತ್ತಲೆಯ ರಾತ್ರಿಯಲ್ಲಿ ಕಾಣದೆ ಬಾವಿಗೆ ಬೀಳುವುದು ಸಹಜವೇ. ಆದರೆ ರಾತ್ರಿಯ ವೇಳೆಯಲ್ಲಿ ನೋಡಿ ಬಂದ ಬಾವಿಗೆ ಹಗಲಿನಲ್ಲಿ ಬೀಳುವುದು ಅಸಹಜವಲ್ಲವೇ? ನಾವು ಕೆಟ್ಟ ಹಾದಿಯನ್ನು ಹಿಡಿದಿದ್ದೇವೆ, ತಪ್ಪು ಮಾಡುತ್ತಿದ್ದೇವೆ ಎಂದು ತಿಳಿದು ಸಹ ಅನೇಕ ಜನ ಸರಿದಾರಿಗೆ ಹೋಗದೆ ಮತ್ತೇ ಮತ್ತೇ ತಪ್ಪನ್ನೇ ಮಾಡುತ್ತಾರೆ. ಕುಡಿತದ ಅಭ್ಯಾಸವಿರುವವರು ಕುಡಿದಾಗ ಮಾಡಬಾರದ ಕೆಲಸ ಮಾಡುತ್ತಾರೆ. ನಶೆ ಇಳಿದ ಮೇಲೆ ಪಶ್ಚಾತ್ತಪ ಪಡುತ್ತಾರೆ. ಇನ್ನು ಕುಡಿಯುವುದಿಲ್ಲವೆಂದು ಸಂಕಲ್ಪ ಮಾಡುತ್ತಾರೆ. ಆದರೆ ಕುಡಿಯುವ ಸಮಯ ಬಂದೊಡನೆ ಅವರ ನಡೆ ಮಧ್ಯದ ಅಂಗಡಿಯಕಡೆ ಇರುತ್ತದೆ. ಎಚ್ಚೆತ್ತು ನಡೆಯಬೇಕು. ತಿಳಿದು ಅಪಾಯಜಹಕ್ಕೆ ಒಳಗಾಗಬಾರದು ಎಂಬುದು ಈ ಗಾದೆಯ ಮಾತಿನ ಅರ್ಥವಾಗಿದೆ.

## IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 6*3=18

**33. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"**

❖ **ಆಯ್ಕೆ :** ಈ ವಾಕ್ಯವನ್ನು **ಶಿವರಾಮಕಾರಂತರ** ಸಾಹಿತ್ಯ ಶ್ರೇಣಿಯ ಸಂಪುಟ ಭಾಗ – 2 ಗ್ರಂಥದ **'ಅಬುವಿನಿಂದ ಬರಮಾಕ್ಕೆ'** ಭಾಗದಿಂದ ಆಯ್ದ **'ಬೆಡಗಿನ ತಾಣ ಜಯಪುರ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಲೇಖಕರು ಹದಿನೈದು ವರ್ಷಗಳ ಹಿಂದೊಮ್ಮೆ ಜಯಪುರಕ್ಕೆ ಹೋಗಿದ್ದರು. ಆಗ ಅಂಬೇರ ಬೆಟ್ಟದಲ್ಲಿ ಜನವಸತಿ ಇದ್ದಿರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಇದನ್ನು ನೋಡಿದ ಸಂದರ್ಭದಲ್ಲಿ ಈ ಮಾತನ್ನು ಲೇಖಕರು ಹೇಳಿದ್ದಾರೆ.

**ಸ್ವಾರಸ್ಯ :** ಜಯಪುರವು ದಿನದಿಂದಕ್ಕೆ ಯಾವ ರೀತಿ ಅಭಿವೃದ್ಧಿಯಾಗಿದೆ. ಈಗ ಜಯಪುರದ ಅಂಬೇರ ಬೆಟ್ಟದಲ್ಲಿ ಗುಡಿಗೋಪುರದಲ್ಲಿ ದೇವರಿಗೆ ಪೂಜೆ ಸಲ್ಲಿಸುತ್ತಿರುವ ಅಂಶ, ಜನರು ಅಲ್ಲಿ ವಾಸಿಸುವ ಅಂಶ ಸ್ವಾರಸ್ಯಕರವಾಗಿದೆ.

---

**34. "ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು."**

❖ **ಆಯ್ಕೆ :** ಈ ವಾಕ್ಯವನ್ನು ಸಂತ **ಡಾ.ಗಜಾನನ ಶರ್ಮ** ಬರೆದಿರುವ **'ಚೆನ್ನಭೈರಾದೇವಿ'** ಎಂಬ ಐತಿಹಾಸಿಕ ನಾಟಕದಿಂದ ಆಯ್ದು **'ಚೆನ್ನಭೈರಾದೇವಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ..

**ಸಂದರ್ಭ :** ಪೋರ್ಚುಗೀಸರ ಸುಸಜ್ಜಿತ ಸೈನ್ಯವನ್ನು ತಂತ್ರಗಾರಿಕೆಯಿಂದಲೇ ಸೋಲಿಸಬೇಕೆಂದು ಮನಗಾಣುತ್ತಿದ್ದಂತಯೇ ಚೆನ್ನಭೈರಾದೇವಿ ಭೈರವ ನಾಯಕರನ್ನು ಉದ್ದೇಶಿಸಿ ಸೈನಿಕರಿಗೆ ಹೇಳಿ, ಇದು ಯುದ್ಧತಂತ್ರ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂದು ಮನವರಿಕೆ ಮಾಡಿಕೊಡುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ನುಡಿಯುವಳು.

**ಸ್ವಾರಸ್ಯ :** ಪೋರ್ಚುಗೀಸರ ಕುತಂತ್ರವನ್ನೇ ತಿರುಗಾಬಾಣವಾಗಿ ಮಾಡುವ ಚೆನ್ನಭೈರಾದೇವಿಯವರ ಯೋಜನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**35. " ನೀನತ್ಯಂತ ಕರುಣಿ"**

❖ **ಆಯ್ಕೆ :** ಈ ವಾಕ್ಯವನ್ನು **ತಿ.ನಂ. ಶ್ರೀಕಂಠಯ್ಯನವರು** ಸಂಪಾದಿಸಿರುವ ಹರಿಹರ ಕವಿಯ **'ನಂಬಿಯಣ್ಣನ ರಗಳೆ'** ಕೃತಿಯಿಂದ ಆಯ್ದ **'ಹರಲೀಲೆ'** ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಶಿವನು ಭೂಲೋಕಕ್ಕೆ ಹೋಗಿ, ನಂಬಿಯಣ್ಣನನ್ನು ಮದುವೆ ಸಂಭ್ರಮದ ಮಂಟಪದಿಂದ ಮತ್ತೆ ಕೈಲಾಸಕ್ಕೆ ಕರೆತರುವೆನು. ಎಂದಾಗ ತಾನು ಬರುವುದಾಗಿ ಗಿರಿಜೆಯು ಹೇಳಿದಾಗ ಶಿವನು ಬೇಡವೆನ್ನುತ್ತಾನೆ. ಏಕೆಂದರೆ ತಾನು ಅಲ್ಲಿ ಕೆಲವು ಕಠೋರವಾದ ನಿಷ್ಠುರವಾದ ಕೆಲಸವನ್ನು ಮಾಡಬೇಕಾಗಿದೆ. ನೀನು ಅದನ್ನು ಸಹಿಸುವುದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಶಿವನು ಗಿರಿಜೆಯನು ಕುರಿತು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಶಿವನು ಭೂಲೋಕಕ್ಕೆ ಬಂದು ನಿಷ್ಠುರವಾದ ಕೆಲಸಗಳನ್ನು ಮಾಡಬೇಕಾಗಿದೆ ಇದನ್ನು ಕರುಣಾಮಯಿಯಾದ ಗಿರಿಜೆಯು ನೋಡಿದರೆ ನನ್ನ ಕೆಲಸಗಳಿಗೆ ಅಡ್ಡಿಪಡಿಸಬಹುದು ಎಂಬುದು ಸ್ವಾರಸ್ಯಕರವಾಗಿದೆ.

---

**36. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"**

❖ **ಆಯ್ಕೆ :** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕವನಸಂಕಲನ ದಿಂದ ಆಯ್ದು **'ಹೊಸಹಾಡು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿ ಕಯ್ಯಾರ ಕಿಞ್ಞಣ್ಣ ರೈ ಅವರು ಹೇಳಿದ್ದಾರೆ. ಹೊಸಹಾಡು, ನವಭಾವ ನವಜೀವನ, ನವಶಕ್ತಿಯನ್ನು ತುಂಬಿಸುವಂತಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದಾರೆ.

**ಸ್ವಾರಸ್ಯ :** ಹಾಡಿಗೆ ಮನುಷ್ಯನ ಬದುಕಿಗೆ ಹೊಸ ತಿರುವನ್ನು ಕೊಡುವ ಶಕ್ತಿಯಿದೆ. ಅಂತಹ ಹಾಡನ್ನು ಗಂಭೀರವಾದ ಭಾವನೆಗಳಿರಬೇಕು ವೀರಧ್ವನಿಯನ್ನು ಮೂಡಿಸಬೇಕು ಎಂಬುದು ಸ್ವಾರಸ್ಯಕರವಾಗಿದೆ.

---

**37. "ಚಂದಿರನೋ ಭಾಸ್ಕರನೋಯೆಂಬಂತೆ"**

❖ **ಆಯ್ಕೆ :** ಈ ವಾಕ್ಯವನ್ನು ತ.ಸು. ಶಾಮರಾಯರು ಸಂಪಾದಿಸಿದ **'ರತ್ನಾಕರವರ್ಣಿ'** ವಿರಚಿತ **'ಭರತೇಶ ವೈಭವ'** ಕಾವ್ಯಭಾಗದಿಂದ ಆಯ್ದ **'ಸಿರಿಯನಿನ್ನೇನ ಬಣ್ಣಿಪೆನು'** ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಭರತನು ರತ್ನ ಖಚಿತವಾದ ಸಿಂಹಾಸನದ ಮೇಲೆ ಕುಳಿತಿರುವ ದೃಶ್ಯವನ್ನು ವರ್ಣಿಸಿದ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾನೆ. ಆಕಾಶದಲ್ಲಿ ಮೋಡದ ಮರೆಯಲ್ಲಿ ಆಗಾಗ ಕಾಣಿಸಿ ಮರೆಯಾಗುವ ಸೂರ್ಯನೋ ಚಂದ್ರನೋ ಎಂದು ಹೇಳಿದ್ದಾರೆ.

**ಸ್ವಾರಸ್ಯ :** ಬಾನಿನಲ್ಲಿ ಸೂರ್ಯ ಚಂದ್ರರು ಯಾವ ರೀತಿ ಶೋಭಿಸುತ್ತಾರೋ ಅದೇ ರೀತಿ ಆಸ್ಥಾನದಲ್ಲಿ ಭರತ ಚಕ್ರವರ್ತಿ ಕಂಗೊಳಿಸುತ್ತಿರುವುದು ಸ್ವಾರಸ್ಯವಾಗಿ ಕವಿ ವರ್ಣಿಸಿದ್ದಾರೆ.

---

**38. "ಮಹಾತ್ಮರ ಕೈಗೆ ಬೆತ್ತ ನಾನಾದೆ"**

❖ **ಆಯ್ಕೆ :** ಈ ವಾಕ್ಯವನ್ನು ಸಂತ ಶಿಶುನಾಳ ಶರೀಫರವರು ಬರೆದಿರುವ 'ಬಿದಿರು' ತತ್ತ್ವಪದವನ್ನು ವಿದ್ವಾನ್ ಸದ್ಯೋಜಾತಮೂರ್ತಿ ಸಂಪಾದಿಸಿರುವ 'ಶಿಶುನಾಳರ ಗೀತೆಗಳು' ಸಂಕಲನದಿಂದ ಆಯ್ದು 'ತತ್ತ್ವಪದಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಬಿದಿರು ಮಕ್ಕಳಿಗೆ ತೂಗುವ ತೊಟ್ಟಿಲಾಗಿದೆ. ರೈತರಿಗೆ ಹೊಲದಲ್ಲಿ ಬೀಜ ಬಿತ್ತಲು ಉಪಯೋಗವಾಗುತ್ತದೆ. ಮಹಾತ್ಮರ ಕೈಗೆ ಬೆತ್ತವಾಗಿ ಬಿದಿರು ಉಪಯೋಗವಾಗುತ್ತದೆ. ಬಿದಿರಿನ ಉಪಯೋಗಗಳನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಬಿದಿರಿನ ಉಪಯೋಗ ಮತ್ತು ಅದರ ಶ್ರೇಷ್ಠತೆ ಸ್ವಾರಸ್ಯಕರವಾಗಿ ಮೂಡಿ ಬಂದಿವೆ.

---

## X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4

**39.** ಹೇಮಂತ ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ.
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮರುತನಿಲ್ಲ

**ಅಥವಾ**

ಹೇಮಂತನಾಳಿಕೆಯ ಕಠಿಣ ಶಾಸನವಿಂತು
ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ.
ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ
ಸಂಸ್ಕಾರ ಪಡೆಯುವುದೆ ಜೀವಗಳ ಧರ್ಮ.

## XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4

**40.** ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರು ಕೂಡ ತಾಳಬೇಕು॥

ಪ್ರಸ್ತುತ ಪದ್ಯಭಾಗವನ್ನು 'ಸು.ರಂ.ಎಕ್ಕುಂಡಿ' ಅವರ 'ಸಮಗ್ರ ಕಥನ ಕವನಗಳು' ಕೃತಿಯಿಂದ ಆಯ್ದ 'ಪಾರಿವಾಳ' ಎಂಬ ಪದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

"ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ ವ್ಯಾಮೋಹವನು ತೊರೆದು ಬಾಳಬೇಕು ಏನು ಬಂದರು ಕೂಡ ತಾಳಬೇಕು" ಎಂಬ ಕವಿಯ ಈ ಸಾಲುಗಳು ಪಾಠವಾಗಿ ನಿಲ್ಲುತ್ತವೆ. ಮಕ್ಕಳು ಬಲೆಯಲ್ಲಿ ಬಿದ್ದಾಗ ತಾಯಿ ಪಾರಿವಾಳ ವ್ಯಾಮೋಹ ಬಿಟ್ಟು ಸ್ವಲ್ಪ ವಿವೇಕದಿಂದ ಯೋಚನೆ ಮಾಡಬೇಕಿತ್ತು. ಇದರಿಂದ ತನ್ನ ಪ್ರಾಣ ಉಳಿಯುತ್ತಿತ್ತು. ಇದೇ ರೀತಿ ಮರಿ ಪಾರಿವಾಳ, ಹೆಂಡತಿ ಪಾರಿವಾಳ ಬಲೆಯಲ್ಲಿ ಬಿದ್ದಾಗ ಗಂಡು ಪಾರಿವಾಳ ಯೋಚನೆ ಮಾಡಿದ್ದರೆ ಪಾರಿವಾಳಗಳ ಕುಟುಂಬ ಸರ್ವನಾಶವಾಗುತ್ತಿರಲಿಲ್ಲ.

ಜೀವನ ಎಂದ ಮೇಲೆ ಕಷ್ಟ ನಷ್ಟ, ಸಮಸ್ಯಗಳು ಬರುತ್ತವೆ. ಸವಾಲುಗಳಿಗೆ ಹೆದರದೆ, ಭಾವುಕರಾಗಿ ಅನಾಹುತಗಳನ್ನು ಮಾಡಿಕೊಳ್ಳದೇ ವಿವೇಕದಿಂದ ಆಲೋಚಿಸಿ ಪರಿಹಾರ ಕಂಡುಕೊಳ್ಳಬೇಕು. ಏನೇ ಬಂದರು ಕಲ್ಲುಬಂಡೆಯಂತೆ ತಾಳಬೇಕು ಎಂದು ಕವಿ ಹೇಳಿದ್ದಾರೆ.

## XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8

**41. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.**

❖ ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡ ಪರರಾಜರ ಕಣ್ಣುಗಳು ಕೆಂಪಾದವು. ಅದರಲ್ಲೂ ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಬಡಿಯಬೇಕೆಂದು ಶತ್ರು ರಾಜರುಗಳು ಕಾಯುತ್ತಿದ್ದರು. ಅವರಲ್ಲಿ ಚೋಳಮಂಡಲದ **ಕುಲೋತ್ತುಂಗನು ಪ್ರಮುಖನಾದವನು. ಗಂಗರ ತಲಕಾಡು ಅವನ ಸ್ವಾಧೀನದಲ್ಲಿತ್ತು. ಕುಲೋತ್ತುಂಗ ಪ್ರಚಂಡ ಆಶಾವಾದಿ. ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾಪಿಶಾಚಿಯಾಗಿದ್ದನು. ಹೊಯ್ಸಳ ಸಾಮ್ರಾಜ್ಯವನ್ನು ತನ್ನ ವಶಮಾಡಿಕೊಳ್ಳಲೆಂದು ಆಶಿಸಿ, ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಿದನು.**

ಚೋಳರಿಗೂ ಮತ್ತು ಹೊಯ್ಸಳರಿಗೂ ಮಳವಳ್ಳಿ, ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು; **ಹೊಯ್ಸಳರ ಕೈ ಮೇಲಾಗಿ ಚೋಳಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು.** ಸಮಸ್ತ ಸೇನೆಯು 'ತಲಕಾಡುಗೊಂಡನಿಗೆ ಜಯವಾಗಲಿ' ಎಂದು ಜೈಕಾರ ಹಾಕಿತು.

*ಅಥವಾ*

**ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.**

❖ ವಿಷ್ಣುವರ್ಧನ ಭೂಪಾಲನು ರಾಜ್ಯದಲ್ಲಿ ಇಲ್ಲದಿದ್ದಾಗ ರಾಜಧಾನಿಯಲ್ಲಿ ಸಂರಕ್ಷಕಳಾಗಿ ನಿಂತಿದ್ದ ದೇವತೆ ಎಂದರೆ ಮಹಾರಾಣಿ ಶಾಂತಲಾದೇವಿ. ಗಂಡುಡೆಯನ್ನುಟ್ಟು ಯುವರಾಜ ಕುಮಾರ ಉದಯಾದಿತ್ಯನನ್ನು ಜೊತೆಯಲ್ಲಿ ಕರೆದುಕೊಂಡು ರಾಜ್ಯ ಸಂಚಾರ ಮಾಡಲು ಹೊರಟಳು. **ಬನದಮ್ಮನಹಳ್ಳಿಯ ಬನಶಂಕರಿಯ ದೇವಾಲಯದ ಮುಂಭಾಗದ ಕಟ್ಟೆಯ ಮೇಲೆ ನೂರಾರು ಜನರು ಒಂದು ಪಂಚಾಯಿತಿ ನೆರೆದಿದ್ದರು. ಕಾರಣ ಬೀರಣ್ಣ ಎಂಬುವವನು ತನ್ನ ಹೊಲವನ್ನು ಈರಣ್ಣನಿಗೆ ಮಾರಾಟ ಮಾಡಿದ್ದ. ಈರಣ್ಣ ಹೊಲವನ್ನು ಉಳುಮೆ ಮಾಡುತ್ತಿರುವಾಗ ಅವನಿಗೆ ಒಂದು ಕೊಪ್ಪರಿಗೆ ಬಂಗಾರ ದೊರೆಯಿತು.** ಅದನ್ನು ಈರಣ್ಣ ಬೀರಣ್ಣನಿಗೆ ನೀಡಲು ಹೋದಾಗ ಬೀರಣ್ಣನು ತೆಗೆದುಕೊಳ್ಳಲು ಒಪ್ಪಲಿಲ್ಲ. ಈರಣ್ಣನು ಸಹ ಈ ಕೊಪ್ಪರಿಗೆ ಬಂಗಾರವನ್ನು ತನ್ನ ಬಳಿ ಇಟ್ಟುಕೊಳ್ಳಲಿಲ್ಲ. ಈ ವಿಚಾರವಾಗಿ ಪಂಚಾಯಿತಿಯಲ್ಲಿ ಚರ್ಚೆ ನಡೆದ ಮೇಲೆ ಅಧ್ಯಕ್ಷ ಕೇತುಮಲ್ಲ ನಾಯಕ 'ಈ ಹೊನ್ನು ರಾಜ್ಯದ ಬೊಕ್ಕಸ ಸೇರಲಿ' ಎಂದು ಹೇಳಿದ. ಜನರೆಲ್ಲರೂ ಒಪ್ಪಿದರು.

ಆದರೆ ಮಾರುವೇಷದಲ್ಲಿದ್ದ ಶಾಂತಲಾ **"ಈ ಕೊಪ್ಪರಿಗೆಯ ಬಂಗಾರ ರಾಜ್ಯದ ಬೊಕ್ಕಸ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ"** ಎಂದಾಗ, ನಾವೆಲ್ಲರೂ ಹೊಯ್ಸಳೇಶ್ವರನ ಮಕ್ಕಳು ಎಂದ ಮೇಲೆ ಇದು ಅವರಿಗೆ ಸೇರಬೇಕು ಎಂದು ಕೇತುಮಲ್ಲ ಹೇಳಿದ. **"ಅಣ್ಣಗಳಿರಾ ನಿಮ್ಮಂತಹ ಪ್ರಜೆಗಳನ್ನು ಪಡೆದ ರಾಜ ಅದೆಷ್ಟು ಪುಣ್ಯವಂತನೋ"** ಎಂದಳು ಶಾಂತಲೆ. ಆಗ ಶಾಂತಲೆ ಮುಂಡಾಸು ತೆಗೆದಳು. ಜನರೆಲ್ಲರಿಗೂ ಬಹಳ ಸಂತೋಷವಾಯಿತು. ನಂತರ ಶಾಂತಲೆ **ಕೊಪ್ಪರಿಗೆ ಬಂಗಾರವು ದೇವ ಕಾರ್ಯಕ್ಕೆ ವಿನಿಯೋಗವಾಗಬೇಕು ಎಂದು ಹೇಳಿ ಕೇತುಮಲ್ಲ ನಾಯಕರು ನಮಗೆಲ್ಲರಿಗೂ ಹಿರಿಯರು ದ್ವಾರಸಮುದ್ರದಲ್ಲಿ ನಿರ್ಮಾಣವಾಗುವ ಅವಳಿ ದೇವಾಲಯಗಳು ಅವರ ಹೆಸರಿನಲ್ಲಿಯೇ ನಿರ್ಮಾಣವಾಗಲಿ ಎಂದು ಹೇಳಿದಳು**. ಕಟ್ಟುವ ದೇವಾಲಯಗಳು ಹೊಯ್ಸಳೇಶ್ವರ ಶಾಂತಲೇಶ್ವರ ಎಂಬ ಹೆಸರಿನಲ್ಲಿರಲಿ ಎಂದು ಒಕ್ಕೊರಲಿನಿಂದ ಜನರೆಲ್ಲರೂ ಕೂಗಿದರು.

**42. ಕನ್ನಡ ನಾಡಿನ ವಿಸ್ತಾರ, ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ?**

❖ ಕನ್ನಡ ನಾಡು ನುಡಿಯ ವೈಶಿಷ್ಟ ಕುರಿತು ಪ್ರಾಚೀನ ಕಾಲದಿಂದಲೂ ಕವಿ ಪರಂಪರೆ ಮನಸಾರೆ ಬಣ್ಣಿಸುತ್ತಾ ಬಂದಿದೆ ಕನ್ನಡ ಸಂಸ್ಕೃತಿ, ಸೊಬಗು, ವೈಭವ, ಸೌಂದರ್ಯ, ಅಪೂರ್ವ ಹಾಗೂ ಅವಿಸ್ಮರಣಿಯ. ಸಂಸ್ಕೃತ ಪ್ರಭಾವ ದಟ್ಟವಾಗಿದ್ದ ಆ ಕಾಲದಲ್ಲಿ ಕನ್ನಡದ ಹಿರಿಮೆ ಹಾಗೂ ಸಂಸ್ಕೃತಿಯನ್ನು ಮೆರೆದ ಸಾಹಸ ಅವರದು, ಕವಿ ಶ್ರೀವಿಜಯನು ಕನ್ನಡನಾಡು **'ಕಾವೇರಿಯಿಂದ–ಗೋದಾವರಿಯವರೆಗೂ ವಿಸ್ತಾರವಾದ ಭೂಮಿಯನ್ನು ಹೊಂದಿತ್ತು'**, ಇಲ್ಲಿನ ಜನ ಪ್ರತಿಭಾ ಸಂಪನ್ನರು, ವಿಶೇಷವಾಗಿ **'ಕುಱಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್'** ಕಾವ್ಯ ಸೃಷ್ಟಿಯಲ್ಲಿ ಮೇಲುಗೈ ಪಡೆದವರು.

ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ ಆಂಡಯ್ಯನು ಕನ್ನಡ ನಾಡಿನ ಪ್ರಾಕೃತಿಕ ಸಂಪತ್ತು ಶ್ರೀಮಂತವಾದುದು ಭೌಗೋಳಿಕ ಹರವಿನ ಸಾಂಸ್ಕೃತಿಕ ವೈಭವ ಮನೋಹರವಾಗಿದೆ. ಇಲ್ಲಿ **ಮಲ್ಲಿಗೆ, ಸಂಪಿಗೆಯ ಪರಿಮಳವಿದೆ. ದಾಳಿಂಬೆ, ತೆಂಗು, ಮಾವು, ಬಾಳೆ ಹೀಗೆ ಹಲವಾರು ಗಿಡಮರಗಳಿಂದ ತುಂಬಿದ್ದು** ಪ್ರಾಕೃತಿಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ.

*ಅಥವಾ*

**ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತವಾಗಿದೆ?**

❖ ಕನ್ನಡ ನಾಡು ನುಡಿಯ ವೈಶಿಷ್ಟ್ಯ ಕುರಿತು ಪ್ರಾಚೀನ ಕಾಲದಿಂದಲು ಕವಿ ಪರಂಪರೆ ಮನಸಾರೆ ಬಣ್ಣಿಸುತ್ತಾ ಬಂದಿದೆ. ಕನ್ನಡ ನಾಡಿನ ಜನತೆ ಕ್ರಮವರಿತು ನಡೆಯಬಲ್ಲರು, ನುಡಿದದ್ದನ್ನು ಅರಿತು ಪಾಲನೆ ಮಾಡಬಲ್ಲರು. ಕಾವ್ಯರಚಿಸುವಂತಹ ಪರಿಣತರು, ಕನ್ನಡ ನಾಡಿನ ಜನತೆ ನಿಜಕ್ಕೂ ಚತುರರು ಎಂದು ಶ್ರೀವಿಜಯ ತನ್ನ ಕವಿರಾಜಮಾರ್ಗದಲ್ಲಿ ತಿಳಿಸಿದ್ದಾನೆ. ನಮಗೆ ತುಪ್ಪವೂ ಬೇಕು, ಎಣ್ಣೆಯು ಬೇಕು, ಸಂಸ್ಕೃತವೂ ಬೇಕು, ಕನ್ನಡವೂ ಬೇಕು, ಆದರೆ ತುಪ್ಪದ ಅಸ್ವಾದ ಮಿಶ್ರಣ ಬೇಡ ಅಂದರೆ ಕನ್ನಡ ಸಂಸ್ಕೃತದ ಮಿಶ್ರಣಬೇಡ ಎಂದಿದ್ದಾನೆ. ಶುದ್ಧ ಕನ್ನಡದೊಳ್ ತಂದಿಕ್ಕುವುದೆ ಸಕ್ಕದಮಂ ಎಂದಿದ್ದಾನೆ ಕವಿ ನಯಸೇನ.

ಕಪಿಸಂತತಿ ಸೇತುವೆಯನ್ನು ಕಟ್ಟಿದಂತೆ, ಹರನು ತನ್ನ ಕಾಲಿನಿಂದ ಮುಗಿಲನ್ನು ಒತ್ತಿ ಹಿಡಿದಂತೆ, ಕವಿಗಳು ಶ್ರೇಷ್ಟವಾದ ಕೃತಿಗಳನ್ನು ರಚಿಸಿದರು ಎಂದು ಕವಿ ನೇಮಿಚಂದ್ರ ಕನ್ನಡ ಕವೀಂದ್ರರ ಶ್ರೇಷ್ಟತೆಯನ್ನು ವರ್ಣಿಸಿದ್ದಾನೆ. ಕನ್ನಡ ಭಾಷೆಯು ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ, ಸುಲಭವೂ ರುಚಿಯುಳ್ಳದ್ದೂ ಆಗಿದೆ. ಆದ್ದರಿಂದ ಕನ್ನಡ ಭಾಷೆಯಿಂದಲೆ ಮೋಕ್ಷಗಳಿಸಿಕೊಂಡರೆ ಸಾಕು ಸಂಸ್ಕೃತದಲ್ಲೇನಿದೆ ಎಂದು ಕವಿ ಮಹಲಿಂಗರಂಗರು ಕನ್ನಡ ಭಾಷೆ ಸಾಹಿತ್ಯದ ಬಗ್ಗೆ ಅಭಿಮಾನದಿಂದ ನುಡಿದ್ದಿದ್ದಾರೆ.

## XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)

43. ಮನುಷ್ಯನಿಗೆ ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ್ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ : ಕನ್ನಡ, ತುಳು, ಕೊಂಕಣಿ, ಮರಾಠಿ ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ : ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯವಹಾರಿಕವಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕೆಂಬ ನಿಯಮವಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ದೇವಭಾಷೆ ಎನಿಸಿರುವ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೇ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ, ಸಂಬಳ ಪಡೆಯುತ್ತಿದ್ದನು. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

**ಪ್ರಶ್ನೆಗಳು :**

**ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯತ್ಯಾಸಗಳೇನು?**

❖ ಮನುಷ್ಯನಿಗೆ ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ್ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ : ಕನ್ನಡ, ತುಳು, ಕೊಂಕಣಿ, ಮರಾಠಿ ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ : ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ ಇತ್ಯಾದಿ.

**ಆ) ಲಿಪಿಯ ಉಗಮ ಹೇಗಾಯಿತು?**

❖ ಈ ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೇ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ, ಸಂಬಳ ಪಡೆಯುತ್ತಿದ್ದನು. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

## XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

44. **ನಿಮ್ಮನ್ನು ರಾಯಚೂರಿನ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಚೈತ್ರಾಲಿ' ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಅನುಭವವನ್ನು ಕುರಿತು ಧಾರವಾಡದಲ್ಲಿರುವ ನಿಮ್ಮ ಅಕ್ಕನಿಗೊಂದು ಪತ್ರಬರೆಯಿರಿ.**

ಕ್ಷೇಮ,

**ರವರಿಂದ,**
ಚೈತ್ರಾಲಿ
9ನೇ ತರಗತಿ
ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆ
ರಾಯಚೂರ
10/02/2021

**ಪೂಜ್ಯ ಮಾತೃಶ್ರೀ ಸಮಾನರಾದ ಅಕ್ಕನಿಗೆ,**

ನಿನ್ನ ಸಹೋದರಿಯಾದ ಚೈತ್ರಾಲಿ ಮಾಡುವ ಶಿರ–ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀನು ಸಹ ಆರೋಗ್ಯವಾಗಿರುವಿಯೆಂದು ತಿಳಿದುಕೊಂಡಿದ್ದೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ. ನಮ್ಮ ಶಾಲೆಯಲ್ಲಿ ಡಿಸೆಂಬರ್ 15, 2021 ರಂದು ಶಾಲಾ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿದ್ದೆವು. ನಮ್ಮ ಶಿಕ್ಷಕರು ಸೇರಿದಂತೆ ಸುಮಾರು 55 ಜನರು ಬೇಲೂರು, ಹಳೆಬೀಡು, ಶ್ರವಣಬೆಳಗೊಳ ಸೇರಿದಂತೆ ಹಲವು ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿದ್ದೆವು. ಅಲ್ಲಿನ ಭವ್ಯವಾದ ಕಲೆ ಮತ್ತು ವಾಸ್ತುಶಿಲ್ಪವನ್ನು ನೋಡಿದಾಗ ಒಂದು ಕ್ಷಣ ನನ್ನನ್ನೆ ನಾನು ಮರೆತಂತೆ ಭಾಸವಾಗುತ್ತಿತ್ತು. ನಿಜವಾಗಿಯೂ ಅವು 'ಭಾರತೀಯ ವಾಸ್ತುಶಿಲ್ಪಗಳ ತೊಟ್ಟಿಲು' ಎಂಬುದು ನನಗರಿವಾಯಿತು. ಇದಲ್ಲದೆ ಇನ್ನು ಸಾಕಷ್ಟು ವಿಷಯವನ್ನು ನಿನ್ನ ಜೊತೆ ಮಾತನಾಡಬೇಕಿದೆ ಪರೀಕ್ಷೆ ಮುಗಿದ ಮೇಲೆ ಇಬ್ಬರು ಭೇಟಿಯಾಗೋಣ. ಹಾಗೆಯೇ ಈ ಪತ್ರ ಮುಟ್ಟಿದ ಕೂಡಲೇ ನಿನ್ನ ಕ್ಷೇಮ ಸಮಾಚಾರವನ್ನು ಕುರಿತು ಪತ್ರವನ್ನು ಬರೆ..

**ನಮಸ್ಕಾರಗಳೊಂದಿಗೆ,**

**ಇತಿ ತಮ್ಮ ಪ್ರೀತಿಯ ಸಹೋದರಿ**
*chaitrali*

**ರವರಿಗೆ,**
ಇಂದುಮತಿ ನಾಯ್ಕ
ವಿದ್ಯಾನಗರ ಬಡಾವಣೆ
ಧಾರವಾಡ – 581421

**ಅಥವಾ**

**ನಿಮ್ಮನ್ನು ನಿಮ್ಮನ್ನು ಹಾವೇರಿಯ ವಿದ್ಯಾನಗರ ಬಡಾವಣೆಯ 'ಸಂಜೀವ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಚರಂಡಿಗಳನ್ನು ದುರಸ್ತಿಪಡಿಸುವಂತೆ ಕೋರಿ, ನಗರಸಭೆಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ. 5*1= 5**

**ರವರಿಂದ,**
ಸಂಜೀವ
ವಿದ್ಯಾನಗರ ಬಡಾವಣೆ
ಹಾವೇರಿ

**ಸ್ಥಳ :** ಹಾವೇರಿ
**ದಿನಾಂಕ:** 21/02/2022

**ರವರಿಗೆ,**
ಮಾನ್ಯ ಅಧ್ಯಕ್ಷರು
ನಗರ ಸಭೆ ಕಾರ್ಯಾಲಯ
ಹಾವೇರಿ – 581421

**ಮಾನ್ಯರೇ,**

**ವಿಷಯ:** ಚರಂಡಿಗಳನ್ನು ದುರಸ್ತಿಪಡಿಸುವಂತೆ ಕೋರಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ–ನಾನು ತಮ್ಮ ನಗರ ಸಭೆ ವ್ಯಾಪ್ತಿಯ ವಿದ್ಯಾ ನಗರ ಬಡಾವಣೆಯ ನಿವಾಸಿಯಾಗಿದ್ದು, ನಮ್ಮ ಬಡಾವಣೆಯ ಬಹುತೇಕ ಚರಂಡಿಗಳು ಮಳೆಗಾಲದಲ್ಲಿ ತುಂಬಿ ಹೋಗಿ, ಚರಂಡಿಯ ನೀರು ರಸ್ತೆಗಳ ಮೇಲೆ, ಅಲ್ಲದೇ ಮನೆಗಳಿಗೆ ನುಗ್ಗಿ, ಜನ–ಜಾನುವಾರುಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ಮಲೀನವಾದ ಚರಂಡಿ ನೀರಿನಿಂದ ಬಡಾವಣೆಯಲ್ಲಿರುವ ಜನರು ಹಲವಾರು ರೋಗಗಳಿಗೆ ತುತ್ತಾಗುತ್ತಿದ್ದಾರೆ.

ಕಾರಣ ಈ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿ, ಆದಷ್ಟು ಬೇಗ ನಮ್ಮ ಬಡಾವಣೆಯ ಚರಂಡಿಗಳನ್ನು ದುರಸ್ತಿಪಡಿಸಬೇಕೆಂದು ತಮ್ಮಲ್ಲಿ ನಮ್ಮ ಬಡಾವಣೆಯ ನಾಗರಿಕರ ಪರವಾಗಿ ವಿನಂತಿಸಿಕೊಳ್ಳುತ್ತೇನೆ..

**ವಂದನೆಗಳೊಂದಿಗೆ,** ತಮ್ಮ ವಿಶ್ವಾಸಿ

**ರವರಿಗೆ,**
ಮಾನ್ಯ ಅಧ್ಯಕ್ಷರು,
ವಿದ್ಯಾನಗರ ಬಡಾವಣೆ
ಹಾವೇರಿ – 581421

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

## 45. ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು :–

**ಪೀಠಿಕೆ :** ಸರ್ವರೂ ಉಪಯೋಗಿಸುವ ಸರ್ವಾಂತರ್ಯಾಮಿ ಪ್ಲಾಸ್ಟಿಕ್, ಮೆದುವಾದ ಮತ್ತು ವಿವಿಧ ಆಕಾರಗಳ ಘನ ಕಾಯಗಳನ್ನು ಹೊಂದಿರುವ ಸಿಂಥಟಿಕ್ ವಸ್ತು. ವಿಶ್ವದಾದ್ಯಂತ ಘನ ತ್ಯಾಜ್ಯ ವಸ್ತುಗಳ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಅತಿ ಭರದಿಂದ ತಲೆಯೆತ್ತಿ ಮೆರೆಯುತ್ತಿರುವ ನಗರಗಳು, ತ್ಯಾಜ್ಯ ವಸ್ತುಗಳ ಹೆಚ್ಚಳಕ್ಕೆ ಮುಖ್ಯವಾದ ಕಾರಣಗಳು, ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಇದು ದೊಡ್ಡ ಸವಾಲಾಗಿದೆ. ಪ್ರಗತಿ ಪರ ರಾಷ್ಟ್ರಗಳಿಗೆ ಇದು ಒಂದು ಭರಿಸಲಾಗದು ಸಮಸ್ಯೆಯಾಗಿದೆ. ನಿರುಪಯುಕ್ತ ಪ್ಲಾಸ್ಟಿಕ್ ಅನ್ನು ಸಿಕ್ಕ ಸಿಕ್ಕಲ್ಲಿ ಎಸೆಯುವುದರಿಂದ, ವಿಲೇವಾರಿಯ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದರಿಂದ ಇದರ ದುಷ್ಪರಿಣಾಮಗಳಿಗೆ ಕಾರಣವಾಗಿದೆ.

**ವಿಷಯ ನಿರೂಪಣೆ :** ಜಗತ್ತಿನ ಯಾವ ಪ್ರದೇಶದಲ್ಲೂ ಯಾವ ರೂಪದಲ್ಲೂ ಕಾಣಸಿಗಬಹುದಾದ ಒಂದೇ ಒಂದು ವಸ್ತುವೆಂದರೆ ಅದು ಪ್ಲಾಸ್ಟಿಕ್. ಮೀನು, ದಿನಸಿ, ಹೋಟೆಲ್, ಬೇಕರಿ, ಆಟಿಕೆ ವಸ್ತುಗಳ ವ್ಯಾಪಾರದಿಂದ ಹಿಡಿದು ಔಷಧ ಕ್ಷೇತ್ರ ಇಲೆಕ್ಟ್ರಾನಿಕ್ ವಸ್ತುಗಳ ಬಳಕೆಯವರೆಗೂ ಪ್ಲಾಸ್ಟಿಕ್‌ನ ಬಳಕೆ ಸರ್ವೇಸಾಮಾನ್ಯವಾಗಿದೆ. ಪ್ಲಾಸ್ಟಿಕ್ ಎಷ್ಟು ಉಪಕಾರವೋ ಅಷ್ಟೇ ಹಾನಿಕರವಾಗಿದ್ದು, ಇಂದು ವಿಶ್ವಕ್ಕೆ ದೊಡ್ಡ ಸಮಸ್ಯೆಯಾಗಿದೆ. ಅದರ ಕೆಲವು ದುಷ್ಪರಿಣಾಮಗಳು ಈ ರೀತಿ ಇವೆ.

ಪ್ಲಾಸ್ಟಿಕ್ ಬಾಟಲಿಯಿಂದ ಬಿಡುಗಡೆಯಾಗುವ ಕಾರ್ಬನ್ ಡೈ ಆಕ್ಸೈಡ್ ಹಾಗೂ ವಿಷಾನಿಲಗಳು ವಾತಾವರಣವನ್ನು ಸೇರಿ **ಜಾಗತಿಕ ತಾಪಮಾನ** ಹೆಚ್ಚಾಗುತ್ತದೆ. ಒಂದು ಪ್ಲಾಸ್ಟಿಕ ಚೀಲದ ವಿಭಜನೆಯಾಗಲು 100 ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಈ ಸಮಯದಲ್ಲಿ ಆ ಪ್ಲಾಸ್ಟಿಕನ ವಿಭಜನೆಯಾಗಿ ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಘಟಕ ಹೊರಬೀಳುತ್ತವೆ. ಆದುದರಿಂದ ಆ ಭಾಗದಲ್ಲಿ **ಭೂಮಿ ಬಂಜರು ಆಗುವ ಪ್ರಕ್ರಿಯೆಯು ಆರಂಭಗೊಳ್ಳುತ್ತದೆ**. ಪ್ಲಾಸ್ಟಿಕ್‌ನಿಂದ ಉಂಟಾಗುವ ಜಲ ಮಾಲಿನ್ಯದಿಂದ ಇಡೀ ಆಹಾರ ಸರಪಳಿ ಮೇಲೆ ದುಷ್ಪರಿಣಾಮ ಬೀರುತ್ತದೆ. ಗೋವು, ನಾಯಿ ಮುಂತಾದ ಪ್ರಾಣಿಗಳು ಆಹಾರವನ್ನು ಹುಡುಕಿ ತ್ಯಾಜ್ಯದಲ್ಲಿ ಇರುವ ಪದಾರ್ಥಗಳನ್ನು ತಿನ್ನುತ್ತವೆ. ಇದರಿಂದ ತ್ಯಾಜ್ಯದಲ್ಲಿರುವ **ಪ್ಲಾಸ್ಟಿಕ ಪ್ರಾಣಿಗಳ ಹೊಟ್ಟೆಯೊಳಗೆ ಹೋಗಿ, ಅವುಗಳಿಗೆ ಕಾಯಿಲೆ ಬರುವಂತಹ ಗಂಭೀರ ಸಮಸ್ಯೆ ನಿರ್ಮಾಣವಾಗಿವೆ**. ಪ್ಲಾಸ್ಟಿಕ್‌ನಿಂದ ಸೋರಿಕೆಯಾಗುವ ವಿಷ ಭೂಮಿ ಸೇರಿ ಅದು ಅಂತರ್ಜಲದಲ್ಲಿ ಲೀನವಾಗುತ್ತದೆ. ಇದರಿಂದ **ಅಂತರ್ಜಲ ವಿಷವಾಗುತ್ತದೆ**. ಭೂ ಮೇಲ್ಮೈ ಮೇಲೆ ಗಾಳಿಯು ಪಾಸ್ಟಿಕ್ ಅನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುತ್ತದೆ. ಜತೆಗೆ, ಗಾಳಿಯಲ್ಲಿ ತೇಲಾಡುವ ಪ್ಲಾಸ್ಟಿಕ್ ಕಂಬಗಳು, ಟ್ರಾಫಿಕ್ ಲೈಟ್‌ಗಳು, ಗಿಡಗಳು, ತಂತಿ ಬೇಲಿಗಳು, ಟವರ್‌ಗಳಿಗೆ ಸಿಲುಕಿಗೊಳ್ಳುತ್ತದೆ ಇದರಿಂದ **ಭೂ ಮಾಲಿನ್ಯ ಉಂಟಾಗುತ್ತದೆ**. ಪ್ಲಾಸ್ಟಿಕ್ ಸುಟ್ಟಾಗ ಉತ್ಪತ್ತಿಯಾಗುವ ವಿಷಾನಿಲ ಇಡೀ ಪರಿಸರವನ್ನೇ ಹಾಳು ಮಾಡುತ್ತದೆ. ವಿಷಯುಕ್ತ ಗಾಳಿಯನ್ನು ಪ್ರಾಣಿಗಳು ಮತ್ತು ಮನುಷ್ಯರು ಸೇವಿಸಿದಾಗ **ಆರೋಗ್ಯದ ಮೇಲೆ ಪರಿಣಾಮ ಬೀರಿ, ಶ್ವಾಸಕೋಶ ತೊಂದರೆಗಳು ಉಂಟಾಗುತ್ತವೆ.**



ಉಪಸಂಹಾರ : ಇಂದಿನ ಆಧುನಿಕ ಜಗತ್ತಿನಲ್ಲಿ ನೆಲ, ಜಲ, ಗಾಳಿ ಎಲ್ಲವನ್ನೂ ಪ್ಲಾಸ್ಟಿಕ್ ಮಾಲಿನ್ಯ ಮಾಡಿದೆ. ಅಂತರ್ಜಲದಿಂದ ಹಿಡಿದು ಸಮುದ್ರದ ನೀರಿನವರೆಗೂ ಪ್ಲಾಸ್ಟಿಕ್ ತನ್ನ ಕಬಂಧಬಾಹು ಚಾಚಿದೆ. ಅಗ್ಗವಾಗಿ ದೊರೆಯುವ ಪ್ಲಾಸ್ಟಿಕ್ ಅನ್ನು ಹಿಂದು ಮುಂದೆ ನೋಡದೆ ಬಳಸುವ ನಾವು, ನಮಗೆ ಅರಿವಿಲ್ಲದಂತೆ ನಮ್ಮ ಸುತ್ತಲಿನ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ನಮ್ಮಿಂದಲೇ ಆಗಿರುವ ಈ ಪ್ರಮಾದವನ್ನು ನಾವೇ ಸರಿಪಡಿಸಬೇಕಿದೆ. ವ್ಯಕ್ತಿಗತ, ಸಾಮೂಹಿಕ ಮತ್ತು ಸರಕಾರದ ಹಂತದಲ್ಲಿ ನಾವೆಲ್ಲರೂ ಒಗ್ಗೂಡಿ ಪರಿಹಾರ ಕಂಡುಕೊಳ್ಳಬೇಕಿದೆ. ಇಲ್ಲದಿದ್ದರೆ, ಮುಂದೊಂದು ದಿನ ಇಡೀ ಪರಿಸರ ಪ್ಲಾಸ್ಟಿಕ್‌ಮಯವಾಗಿ ಉಸಿರಾಡಲು ಗಾಳಿ, ಕುಡಿಯಲು ನೀರು ಮತ್ತು ತಿನ್ನಲು ಆಹಾರ ಎಲ್ಲವನ್ನೂ ವಿಷಮಯವಾಗಿಸುತ್ತದೆ. ಈಗಲೂ ಕಾಲ ಮಿಂಚಿಲ್ಲ, ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣ ಮಾಡೋಣ.

***ಅಥವಾ***

## ❖ ಸ್ವಾತಂತ್ರ್ಯದ ಅಮೃತ ಮಹೋತ್ಸವ :–

**ಪೀಠಿಕೆ :–** ಭಾರತದ ಸ್ವಾತಂತ್ರ್ಯದ 75 ವರ್ಷಗಳ ಸ್ಮರಣಾರ್ಥ ಆಜಾದಿ ಕಾ ಅಮೃತ್ ಮಹೋತ್ಸವವನ್ನು ಆಚರಣೆ ಮಾಡಲಾಗುತ್ತಿದೆ. **2021 ಮಾರ್ಚ್ 12 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಹಮದಾಬಾದ್‌ನ ಸಬರಮತಿ ಆಶ್ರಮದಿಂದ "ಪಾದಯಾತ್ರೆ"(ಸ್ವಾತಂತ್ರ್ಯ ಮಾರ್ಚ್) ಆರಂಭ ಮಾಡಿದ್ದರು.** ಈ ಮೂಲಕ ದೇಶಾದ್ಯಂತ ಆಜಾದಿ ಕಾ ಅಮೃತ್ ಮಹೋತ್ಸವ ಚಟುವಟಿಕೆಗಳಿಗೆ ಚಾಲಾನೆ ನೀಡಲಾಗಿತ್ತು.ಈ ಪಾದಯಾತ್ರೆಗೆ **ಆಗಸ್ಟ್ 15, 2022 ಕ್ಕೆ 75 ವಾರಗಳು ತುಂಬಲಿವೆ. ಆಜಾದಿ ಕಾ ಅಮೃತ್ ಮಹೋತ್ಸವವು ಆಗಸ್ಟ್ 15, 2023ರ ವರೆಗೆ ಮುಂದುವರೆಯುತ್ತದೆ.** ಅಮೃತ ಮಹೋತ್ಸವದ ಅಂಗವಾಗಿ, ದೇಶದ 75 ಸ್ಥಳಗಳಲ್ಲಿ ಸ್ವಾತಂತ್ರ್ಯ ಹೋರಾಟದ 75 ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಿಂದ ಮರೆತುಹೋದ ಹಲವಾರು ಕ್ಷಣಗಳನ್ನು ರಾಷ್ಟ್ರದ ಮುಂದೆ ಅನಾವರಣಗೊಳಿಸಲಾಗುತ್ತದೆ.

**ವಿಷಯ ನಿರೂಪಣೆ :-** **ಆಜಾದಿಯ ಅಮೃತ ಮಹೋತ್ಸವ ಎಂದರೆ ಸ್ವಾತಂತ್ರ್ಯ ಹೋರಾಟಗಾರರಿಂದ ಪಡೆದ ಸ್ಫೂರ್ತಿಯ ಅಮೃತ.** ಸ್ವಾತಂತ್ರ್ಯದ ಅಮೃತ ಎಂದರೆ ಹೊಸ ಆಲೋಚನೆಗಳ ಅಮೃತ, ಹೊಸ ಸಂಕಲ್ಪಗಳ ಅಮೃತ, ಸ್ವಾತಂತ್ರ್ಯದ ಅಮೃತ, ಭಾರತವು ಸ್ವಾವಲಂಬಿಯಾಗಲು ಪ್ರತಿಜ್ಞೆ ತೆಗೆದುಕೊಳ್ಳುವ ಹಬ್ಬ. **ಭಾರತವನ್ನು ಬ್ರಿಟಿಷರಿಂದ ಮುಕ್ತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಭಾರತದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಹಬ್ಬವನ್ನು ಸಮರ್ಪಿಸಲಾಗಿದೆ.** ಈ ಅಭಿಯಾನದ ಹಿಂದಿರುವ ಇನ್ನೊಂದು ಉದ್ದೇಶ ಭಾರತವನ್ನು ಸ್ವಾವಲಂಬಿಯಾಗಿಸುವುದು. **ಆಜಾದಿಯ ಅಮೃತ ಮಹೋತ್ಸವವು ದೇಶದಲ್ಲಿ ಸ್ಥಳೀಯ ವ್ಯಾಪಾರ ಮತ್ತು ಉತ್ಪಾದನೆಯನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ. ಇದರಿಂದ ಭಾರತ ಆದಷ್ಟು ಬೇಗ ಸ್ವಾವಲಂಬಿಯಾಗುತ್ತದೆ**. ಈ ಅಭಿಯಾನದಲ್ಲಿ, ನಮ್ಮ ದೇಶದ ವಿವಿಧ ಸಂಸ್ಕೃತಿಗಳನ್ನು ತಿಳಿದುಕೊಳ್ಳುವ ಅವಕಾಶವನ್ನು ನಾವು ಪಡೆಯುತ್ತೇವೆ. **ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಭಿಯಾನದ ಉದ್ದೇಶಗಳಲ್ಲಿ ವಿವಿಧತೆಯಲ್ಲಿ ಏಕತೆ ಕೂಡ ಒಂದು.** ಆಜಾದಿ ಕಾ ಅಮೃತ್ ಮಹೋತ್ಸವವು ಭಾರತದ ಸ್ವಾತಂತ್ರ್ಯ ಹೋರಾಟಗಾರರ ಸಾಧನೆಗಳು, ವಿಜಯಗಳು ಮತ್ತು ತ್ಯಾಗಗಳನ್ನು ಆಚರಿಸಲು ಮತ್ತು ತಿಳಿದುಕೊಳ್ಳಲು ಭಾರತ ಸರ್ಕಾರವು ಪ್ರಾರಂಭಿಸಿದ ಉಪಕ್ರಮವಾಗಿದೆ. ಉಪಕ್ರಮದ ಉದ್ದೇಶವು **ಭಾರತದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಸಾಧನೆಗಳ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು**.ಆಜಾದಿಯ ಅಮೃತ್ ಮಹೋತ್ಸವವು ಭಾರತದ ಪ್ರತಿಯೊಬ್ಬ ಪ್ರಜೆಗೂ ಅವರ ಗುಪ್ತ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಅನ್ವೇಷಿಸಲು ಪ್ರೋತ್ಸಾಹಿಸುತ್ತದೆ. ಇದು ಭಾರತದ ಸುಧಾರಣೆಗೆ ಜನರು ಕೊಡುಗೆ ನೀಡುವಂತೆ ಮಾಡುವ ಗುರಿಯನ್ನು ಹೊಂದಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಮುಖ್ಯ ವಿಷಯಗಳೆಂದರೆ ಸ್ವಾತಂತ್ರ್ಯ 2.0, **ವಿಶ್ವ ಗುರು ಭಾರತ, ಆತ್ಮನಿರ್ಭರ ಭಾರತ, ಆಲೋಚನೆಗಳು, ಸಾಧನೆಗಳು ಮತ್ತು ನಿರ್ಣಯಗಳು, ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ. ಸಾಧನೆಗಳು ಮತ್ತು ನಿರ್ಣಯಗಳು, ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಹಾಡದ ವೀರರ ಬಗ್ಗೆ ತಿಳಿದುಕೊಳ್ಳುವುದು.** ಅಲ್ಲದೇ ಭಾರತ ಸ್ವಾತಂತ್ರ್ಯದ 75 ವರ್ಷಗಳನ್ನು ಪೂರೈಸಿದ ಆಜಾದಿ ಕಾ ಅಮೃತ್ ಮಹೋತ್ಸವದ ಭಾಗವಾಗಿ **'ಹರ್ ಘರ್ ತಿರಂಗ'** ಅಭಿಯಾನವನ್ನು ಸಹ ಪ್ರಾರಂಭಿಸಲಾಗಿದೆ. ಪ್ರತಿಯೊಬ್ಬ ಭಾರತಿಯನ ಮನೆಯ ಮೇಲೆ ಭಾರತೀಯ ಧ್ವಜವನ್ನು ಹಾರಿಸುವುದು ಇದರ ಉದ್ದೇಶವಾಗಿದೆ.



**ಉಪಸಂಹಾರ:** ಇಂದಿನ ಪೀಳಿಗೆಯವರು ಪುಸ್ತಕಗಳ ಮೂಲಕ ಅಲ್ಪಸ್ವಲ್ಪ ಮಾಹಿತಿ ಪಡೆದರೂ ಸ್ವಾತಂತ್ರ್ಯದ ಹೋರಾಟವನ್ನು ಹತ್ತಿರದಿಂದ ಅರಿಯಲು ಸಾಧ್ಯವಾಗಿಲ್ಲ.ಅದಕ್ಕಾಗಿಯೇ ಸ್ವಾತಂತ್ರ್ಯದ ಅಮೃತೋತ್ಸವವೂ ಬಹುಮುಖ್ಯವಾಗಿದ್ದು ಇಂದಿನ ಪೀಳಿಗೆಗೆ ಸ್ವಾತಂತ್ರ್ಯದ ಬಗ್ಗೆ ವಿವಿಧ ರೀತಿಯಲ್ಲಿ ತಿಳಿಸಬಹುದಾಗಿದೆ. ಅವರಿಗೆ ಹೋರಾಟದ ಕಥೆಯನ್ನು ಸರಿಯಾಗಿ ಹೇಳಬಹುದು ಮತ್ತು ಹೇಳಬಹುದು, ಇದರಿಂದ ಅವರ ಮನಸ್ಸಿನಲ್ಲಿ ದೇಶಪ್ರೇಮದ ಪ್ರೀತಿ ಹೆಚ್ಚಾಗುತ್ತದೆ ಮತ್ತು ಅವರು ತಮ್ಮ ದೇಶದ ಬಗ್ಗೆ ಹೆಚ್ಚು ಜವಾಬ್ದಾರಿಯುತರಾಗುತ್ತಾರೆ.